ಕೆಲವೇ ದಿನಗಳಲ್ಲಿ ವ್ಯಾಪಾರ ಕುದುರತೊಡಗಿತು. ಭಿಕ್ಷುಕರ ಕೊಳೆ ಬಟ್ಟೆಗಳನ್ನು ದುಬಾರಿ ಬೆಲೆ ತೆತ್ತು ಶ್ರೀಮಂತ ಯುವಕರು ತೊಡಲು ಮುಂದಾದರು. ಈಗ ರೋರಿಂಗ್ ಬಿಸಿನೆಸ್!

'ಇದೊಂದು ಪರಮಾಶ್ಚರ್ಯವಲ್ಲವೇ ಅಣ್ಣ? ಈಗ ನಾನು ಊರಿಗೆ ಬಂದಿರುವುದು ಬಿಸಿನೆಸ್‌ನ ಮೇಲೆಯೆ. ಇಂಥ ಊರುಗಳಲ್ಲಿ ಹಳೆ ಬಟ್ಟೆಗಳೆಂದರೆ ತಾತ್ಸಾರವಲ್ಲವೇ? ಅವುಗಳನ್ನು ಸಂಗ್ರಹಿಸಲೆಂದೇ ನಾನು ಬಂದುದು. ನಿಮ್ಮಲ್ಲೂ ಇದ್ದರೆ ನನಗೆ ಕೊಡಿ, ಅಂಗಿ, ಬನೀನು, ಪ್ಯಾಂಟ್ಸು, ಚಡ್ಡಿ, ಅಂಡರ್‌ವೇರ್...'

'ಅಂಡರ್‌ವೇರ್?'

'ಅದಕ್ಕೂ ಬೇಡಿಕೆಯುಂಟು, ಯಾರು ಯಾರನ್ನೋ ಇಂಪ್ರೆಸ್ ಮಾಡೋದಕ್ಕೆ ತಗೊಂಡೋಗ್ತಾರೆ!'

'ಒಂದು ಡೆನೀಮ್ ಪ್ಯಾಂಟಿದೆ ಮಾರಾಯಾ. ತುಂಬಾ ಹಳತಾಗಿದೆ. ಏನು ಮಾಡೋಣ, ಯಾರಿಗೆ ಕೊಡೋಣ ಅಂತ ಯೋಚಿಸ್ತ ಇದ್ದೆ. ಬಿಸಾಕಲು ಮನಸ್ಸು ಬರಲಿಲ್ಲ.'

'ನನಗೆ ಕೊಡಿ, ನನಗೆ ಅಂಥಾದ್ದೇ ಬೇಕು.'

'ಹೇಗೆ ಕೊಡಲಿ? ಅದರ ಕುಂಡೆ ಹರಿದಿದೆ!'

'ಕುಂಡೆ ಹರಿದಿದೆಯೇ? ವಂಡರ್‌ಫುಲ್! ಅದಕ್ಕೆ ಎಷ್ಟು ಬೇಕಾದರೂ ಕೊಡುತ್ತೇನೆ.'

'ನೀನೇನೂ ಕೊಡುವುದು ಬೇಡಪ್ಪಾ, ತೆಗೆದುಕೊಂಡು ಹೋದರೆ ಸಾಕು.'

'ಹರಿದು ತೂತಾದ ಬನೀನು, ಅಂಡರ್‌ವೇರು?'

'ಇವೆ ಒಂದೆರಡು, ಉದ್ದಿನ ದೋಸೆಯಂತೆ ನೂರಾರು ಕಣ್ಣುಗಳು ಅವಕ್ಕೆ.'

'ಕಣ್ಣುಗಳಿಗೆ ಚಿನ್ನದ ಬೆಲೆ!'

'ಆದರೆ ಅವೀಗ ತೊಳೆಯದೆ ವಾಸನೆ ಬರುತ್ತಿವೆ.'

'ವಾಸನೆ ಬರೋದೆಂದರೆ ಚಿನ್ನಕ್ಕೆ ಪರಿಮಳ ಹಚ್ಚಿದ ಹಾಗೆ ಅಣ್ಣಯ್ಯ. ಬೆವರಿನ ವಾಸನೆ, ಮಣ್ಣಿನ ವಾಸನೆ ಈಗ ಮೊದಲಿನ ಹಾಗಲ್ಲ. ನನಗೆ ಬೇಕು.'

'ವಾಸನೆಗೆ ಯಾಕಿಷ್ಟು ಡಿಮಾಂಡು? ಅರ್ಥವಾಗಲಿಲ್ಲ.'

'ಯಾಕೆಂದರೆ ಅಂಥಾ ಸೆಕೆಂಡ್ಸ್ ಹೆಚ್ಚು ತಾಜಾ, ಹೆಚ್ಚು ಜನುಯಿನ್ ಆಗಿರ್ತವೆ, ಅದಕ್ಕೇ!' ಎಂದ ತಾನ್‌ಸೇನ, ಸಹಜವಾಗಿ, ಯಾವ ವ್ಯಂಗ್ಯವೂ ಇಲ್ಲದೆ.

'ಬೆಸ್ಟ್ ಆಫ್ ಲಕ್ ಕಣೋ! ಇಗೋ ಎಲ್ಲ ತೆಗೆದುಕೋ!' ಎಂದು ಎಲ್ಲವನ್ನೂ ಕೊಟ್ಟುಬಿಟ್ಟೆ.

ತಾನ್‌ಸೇನ ಅಷ್ಟಕ್ಕೆ ಬಿಡಲಿಲ್ಲ. ಮೂಲೆಯಲ್ಲಿ ಬಿದ್ದಿದ್ದ ಚಪ್ಪಲಿ ತೋರಿಸಿ, 'ಕೊಡ್ತೀರಾ?' ಎಂದ.

'ಒಂದರ ಅಂಗುಷ್ಟ ಹರಿದಿದೆ, ಇನ್ನೊಂದರ ಬಾರು ಬಿಚ್ಚಿದೆ,' ಎಂದೆ.

'ಬಿಚ್ಚಿದೆ!' ಆ ಮಾತಿಗೆ ತಾನ್‌ಸೇನ್ ಪುಳಕಿತನಾದಂತೆ ಕಂಡ. 'ಅದೇ ನನಗೆ ಬೇಕಾದ್ದು!' ಎಂದ.

## ಕೆ.ವಿ. ತಿರುಮಲೇಶ್

ಕವಿ, ಕತೆಗಾರ ತಿರುಮಲೇಶ್ ಕಾಸರಗೋಡಿನ ಕಾರಡ್ಕದವರು. 'ಮುಖಾಮುಖಿ', 'ಅವಧ', 'ಪಾಪಿಯೂ', 'ಅಕ್ಷಯ ಕಾವ್ಯ', 'ಅರಬ್ಬಿ' ಅವರ ಕೆಲವು ಕವನಸಂಗ್ರಹಗಳು. ಇಂಗ್ಲಿಷ್ ಅಧ್ಯಾಪಕರಾಗಿ, ಭಾಷಾವಿಜ್ಞಾನಿಯಾಗಿ ಬಹುಕಾಲ ಕನ್ನಡನಾಡಿನ ಹೊರಗಿದ್ದುಕೊಂಡೇ ಬರೆದ ಅವರು ಪ್ರಸ್ತುತ ಹೈದರಾಬಾದಿನಲ್ಲಿ ನೆಲೆಸಿದ್ದಾರೆ.